# ಸ್ಮಾರಕ ಶಿಲ್ಪಗಳ ಪಾರಂಪರಿಕ ಮಹತ್ವ

**ಎಸ್.ಪಿ. ಕೊಕಟನೂರ**

ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಸರಕಾರಿ ಪ್ರಥಮ ದರ್ಜೆ ಕಾಲೇಜು, ಮುಧೋಳ.

DOI: https://doi.org/10.5281/zenodo.17296437

## ABSTRACT:

ಪ್ರಾಚೀನ ಭಾರತದ ಇತಿಹಾಸದಲ್ಲಿ ಅರಸರ ಯಶಸ್ಸಿಗೆ ಶ್ರಮಿಸಿದ ಹಾಗೂ ಬೆನ್ನೆಲುಬಾಗಿ ನಿಂತಿದ್ದ ಸಾಮಾನ್ಯ ವರ್ಗದ ಜನರು ತಮ್ಮ ಪ್ರಾಣವನ್ನೇ ಮುಡುಪಾಗಿಟ್ಟಿದ್ದ ಹಲವು ಉದಾಹರಣೆಗಳು ಸಿಗುತ್ತವೆ. ನಮ್ಮ ಪರಿಸರದಲ್ಲಿ ಕಂಡುಬರುವ ವೀರಗಲ್ಲು, ಮಾಸ್ತಿಗಲ್ಲು, ನಿಷಿಧಿಗಲ್ಲು ಹಾಗೂ ಇತರೆ ಬಲಿದಾನ ಶಿಲ್ಪಗಳಂತಹ ಸ್ಮಾರಕ ಶಿಲ್ಪಗಳು ತ್ಯಾಗದ ಸಂಕೇತವಾಗಿ ನಮಗೆ ಕಂಡುಬರುತ್ತವೆ. ಬೇರೆ ಕಾಲಾವಧಿಯಲ್ಲಿ ನಿರ್ಮಿತಗೊಂಡಿರುವ ಸ್ಮಾರಕ ಶಿಲ್ಪಗಳೂ ಸಮಕಾಲೀನ ಇತಿಹಾಸದ ಪ್ರಮುಖವಾದ ಆಕರಗಳೆನ್ನಬಹುದು. ವಿವಿಧ ಕಾರಣಗಳಿಂದ ಮರಣ ಹೊಂದಿದ ವ್ಯಕ್ತಿಗಳ ನೆನಪಿಗಾಗಿ ನಿಲ್ಲಿಸಿರುವಂತಹ ಶಿಲೆಗಳಾಗಿವೆ. ಬೃಹತ್ ಶಿಲಾಯುಗದಿಂದಲೇ ಇವುಗಳನ್ನು ನೆಡುವ ರೂಢಿ ಇತ್ತೆಂದು ನಮಗೆ ತಿಳಿದು ಬರುವ ಸಂಗತಿಯಾಗಿದೆ. ಸ್ಮಾರಕ ಶಿಲ್ಪಗಳು ವಿವಿಧ ಕಾರಣಗಳಿಗಾಗಿ ಮಡಿದ ವ್ಯಕ್ತಿಗಳ ತ್ಯಾಗ-ಬಲಿದಾನಗಳ ಸಂಕೇತವಾಗಿವೆ.

## KEYWORDS:

ಕೇಶಾಲಂಕಾರ, ಶಾಸನ ಶಿಲ್ಪ, ಅಪ್ಸರೆ, ಆತ್ಮಬಲಿ, ಹರಕೆ

**ಪೀಠಿಕೆ:**

ಇತಿಹಾಸ ಕಾಲಘಟ್ಟದ ಭವ್ಯ ಪರಂಪರೆಯ ಪ್ರತೀಕವಾಗಿವೆ. ನಮ್ಮ ಪ್ರಾಚೀನ ಜನರ ಸಾಮಾಜಿಕ ರೂಢಿಗಳು, ಆಚರಣೆಗಳು, ಸಂಪ್ರದಾಯಗಳು, ಯುದ್ಧಕಲೆ, ಉಡಿಗೆ ತೊಡಿಗೆ, ಆಭರಣ, ಕೇಶಾಲಂಕಾರ, ಪಶು-ಪ್ರಾಣಿಗಳ ಮುಂತಾದ ಅಂಶಗಳ ಮೇಲೆ ಬೆಳಕನ್ನು ಚೆಲ್ಲುತ್ತವೆ. ಇಂತಹ ಸಾವಿರಾರು ಸ್ಮಾರಕ ಶಿಲ್ಪಗಳನ್ನು ಕರ್ನಾಟಕದಾದ್ಯಂತ ನೆಟ್ಟಿರುವ ಉದಾಹರಣೆಗಳಿವೆ. ಇದರ ಜೊತೆಗೆ ಗ್ರಾಮಗಳಿಗೆ ತೊಂದರೆಯಾದಾಗ ಮತ್ತು ಮಹಿಳೆಯರಿಗೆ ಅಗೌರವ ತೋರುವ ಸಂದರ್ಭಗಳು ಬಂದಾಗಲೂ ಕೂಡ ವೀರತನದಿಂದ ಹೋರಾಡಿ ಮಡಿದ ಜನರ ಸ್ಮರಣಿಕೆಯಾಗಿವೆ. ಭಾರತೀಯ ಪರಂಪರೆಯಲ್ಲಿ ಪ್ರಾಚೀನ ಕಾಲದಿಂದಲೂ ಶೂರತನಕ್ಕೆ ತನ್ನದೇ ಆದಂತಹ ಪ್ರಮುಖ ಸ್ಥಾನವಿದೆ. ಕಲಿಯತನದಿಂದ ಹೋರಾಡಿ ಮಡಿದರೆ ಸ್ವರ್ಗ ಪ್ರಾಪ್ತಿ ಎಂಬುದು ನಮ್ಮ ಪರಂಪರೆಯ ಪ್ರಮುಖವಾದ ನಂಬಿಕೆಯಾಗಿತ್ತು.

**1. ಸ್ಮಾರಕ ಶಿಲ್ಪಗಳ ವಿಧಗಳು:**

ಅಧ್ಯಯನದ ದೃಷ್ಟಿಯಿಂದ ಸ್ಮಾರಕ ಶಿಲ್ಪಗಳನ್ನು ವಿವಿಧ ರೀತಿಯಾಗಿ ವಿಂಗಡಿಸಬಹುದಾಗಿದೆ. ಅವುಗಳಲ್ಲಿ ವೀರಗಲ್ಲುಗಳು (ವೀರಶಾಸನ ಶಿಲ್ಪಗಳು) ಅತ್ಯಂತ ಮುಖ್ಯವಾದ ಆಕರಗಳೆನ್ನಬಹುದು. ಅವುಗಳಲ್ಲಿ, ತುರುಗೋಳ್ ಹೋರಾಟದಲ್ಲಿ ಮಡಿದವರ ಸ್ಮಾರಕ ಶಿಲ್ಪಗಳು, ಪೆಣ್ಬುಯ್ಯಲ್ ಕಾಳಗದಲ್ಲಿ ಮಡಿದವರ ಶಿಲ್ಪಗಳು, ಬೇಟೆಯಲ್ಲಿ ಮಡಿದವರ ಶಿಲ್ಪಗಳು, ಊರಳಿವಿನ ಸಂದರ್ಭದಲ್ಲಿ ಮಡಿದವರ ಶಿಲ್ಪಗಳು, ಕಳ್ಳರಿಂದ ಮಡಿದವರ ವೀರಗಲ್ಲುಗಳು, ಕೋಟೆಕಾಳಗದ ಶಿಲ್ಪಗಳು, ಗಡಿಕಾಳಗದಲ್ಲಿ ಮಡಿದವರ ಸ್ಮಾರಕ ಶಿಲ್ಪಗಳು ಪ್ರಮುಖವಾಗಿವೆ.

ಇವುಗಳಲ್ಲದೆ, ದಾನಶಾಸನ ಶಿಲ್ಪಗಳು ಕೂಡ ಪ್ರಮುಖವಾದ ಸ್ಮಾರಕ ಶಿಲ್ಪಗಳಾಗಿವೆ.

ಅವುಗಳಲ್ಲಿ ಶೈವ, ವೈಷ್ಣವ, ಜೈನ ಶಾಸನ ಶಿಲ್ಪಗಳು (ಶಾಸನ ಮತ್ತು ಶಾಸನೋಕ್ತ ಮೂರ್ತಿಶಿಲ್ಪ, ಧರ್ಮ ಸಮನ್ವಯ ಶಾಸನ ಶಿಲ್ಪ, ಗೋಸಹಸ್ರ ದಾನ ಶಾಸನ ಶಿಲ್ಪ, ವಾಮನಮುದ್ರೆ ಕಲ್ಲುಗಳೂ ಸಹ ಪ್ರಮುಖವಾಗಿವೆ. ಜೊತೆಗೆ ಬಲಿದಾನ ಶಿಲ್ಪಗಳು ಕೂಡ ಪ್ರಮುಖವಾದ ಸ್ಮಾರಕ ಶಿಲ್ಪಗಳೆಂದು ಪರಿಗಣಿಸಲಾಗಿದೆ. ಅವುಗಳಲ್ಲಿ ಲೌಕಿಕ ಬಲಿದಾನ ಶಿಲ್ಪಗಳು ಮತ್ತು ಮಹಾಸತಿ ಶಿಲ್ಪಗಳು ಪ್ರಮುಖವಾಗಿವೆ. ಇಂತಹ ಸ್ಮಾರಕ ಶಿಲ್ಪಗಳಲ್ಲಿ ಧಾರ್ಮಿಕ ಕಾರಣದಿಂದ ನೆಟ್ಟಿರುವ ಬಲಿದಾನ ಶಿಲ್ಪಗಳು ಸಹ ಕಂಡುಬರುತ್ತವೆ. ಅವುಗಳಲ್ಲಿ ನಿಶಿಧಿ ಶಿಲ್ಪಗಳು, ಹರಕೆ ಬಲಿದಾನ ಶಿಲ್ಪಗಳು, ಸೂರ್ಯಗ್ರಹಣ ಬಲಿದಾನ ಶಿಲ್ಪ, ಉರಿ ಉಯ್ಯಾಲೆ ಶಾಸನ ಶಿಲ್ಪ, ಶೂಲಬಲಿ ಶಿಲ್ಪ, ಶಿರಬಲಿ ಶಿಲ್ಪ, ಸಿಡಿತಲೆ ಮುಂತಾದವು ಪ್ರಮುಖವಾಗಿವೆ.

**2. ಸಾಮಾನ್ಯ ವೀರಗಲ್ಲುಗಳು:**

'ವೀರಗಲ್ಲು'ಗಳೆಂದರೆ ಯಾವುದೇ ಹೋರಾಟದಲ್ಲಿ ಮಡಿದವರ ಸ್ಮಾರಕವಾಗಿ ನೆಟ್ಟಿರುವ ಕಲ್ಲುಗಳನ್ನು ವೀರಗಲ್ಲುಗಳೆಂದು ಕರೆಯುತ್ತಾರೆ. ಇವು ಬರಹವನ್ನು ಮಾತ್ರವಲ್ಲದೇ ಶಿಲ್ಪದ ವಿವರಗಳನ್ನೂ ಹೊಂದಿರುತ್ತವೆ. ಅಂದರೆ, ಶಾಸನ ಮತ್ತು ಶಿಲ್ಪ. ಆ ವೀರಗಲ್ಲು ಯಾವ ವೀರನ ಸ್ಮಾರಕವಾಗಿದೆಯೋ ಆ ವೀರನ ಪರಾಕ್ರಮವನ್ನು ಸಾರುವಂತಹವೇ ಆಗಿರುತ್ತವೆ.

**"ಜಿತೇನ ಲಭ್ಯತೇ ಲಕ್ಷ್ಮೀರ್ಮೃತೇನಾಪಿ ಸುರಾಂಗನಾ**
**ಕ್ಷಣವಿಧ್ವಂಸಿನೀ ಕಾಯೇ ಕಾ ಚಿಂತಾ ಮರಣೇರಣೇ"**

ಅಂದರೆ: ಕ್ಷಣಾರ್ಧದಲ್ಲಿ ನಾಶವಾಗುವ ಈ ಅಶಾಶ್ವತ ದೇಹದ ಬಗ್ಗೆ ಏಕೆ ಇಲ್ಲದ ಮೋಹ, ಗೆದ್ದರೆ ರಾಜಲಕ್ಷ್ಮೀಯು ದೊರೆಯುತ್ತಾಳೆ. ಮಡಿದರೆ ಅಪ್ಸರೆಯರು ಒಲಿಯುತ್ತಾರೆ. ಆದ್ದರಿಂದ ಈ ದೇಹದ ಮೇಲಿನ ಮೋಹವನ್ನು ತೊರೆದು ಯುದ್ಧ ಪ್ರವೃತ್ತನಾಗು ಎಂದು ಈ ಶ್ಲೋಕ ವೀರರನ್ನು ಹುರಿದುಂಬಿಸುತ್ತದೆ.

ವೀರಗಲ್ಲಿನ ಪಟ್ಟಿಕೆಯ ಹಂತಗಳು: ವೀರಗಲ್ಲುಗಳಲ್ಲಿ ವಿವಿಧ ಹಂತಗಳನ್ನು ಕಾಣಬಹುದಾಗಿದೆ.

- ಮೊದಲನೆಯ ಹಂತದಲ್ಲಿ: ವೀರನು ಶತ್ರುಪಕ್ಷದವರೊಡನೆ ಹೋರಾಟ ಮಾಡುತ್ತಿರುವ ಚಿತ್ರಣ ದೊರೆಯುತ್ತದೆ.
- ಎರಡನೆಯ ಹಂತದಲ್ಲಿ: ಸಾಮಾನ್ಯವಾಗಿ ಈ ಹಂತದಲ್ಲಿ ವೀರನನ್ನು ಅಪ್ಸರೆಯರು ಸ್ವರ್ಗಕ್ಕೆ ಕೊಂಡೊಯ್ಯುವ ದೃಶ್ಯವನ್ನು ಗಮನಿಸಬಹುದು. ವೀರನನ್ನು ಸ್ವರ್ಗಕ್ಕೆ ಕೊಂಡೊಯ್ಯುವ ವಿಧಾನವನ್ನು ಶಿಲ್ಪಿಗಳು ಎರಡು ರೀತಿಗಳಲ್ಲಿ ಬಿಡಿಸಿರುತ್ತಾರೆ.
- ಮೂರನೆಯ ಹಂತದಲ್ಲಿ: ವೀರನು ಸ್ವರ್ಗದಲ್ಲಿ ಇರುವಂತೆ ಶಿಲ್ಪದ ವಿವರಗಳನ್ನು ಬಿಡಿಸಲಾಗಿರುತ್ತದೆ. ಇಲ್ಲಿ ವೀರನು ಪದ್ಮಾಸನದಲ್ಲಿಯೋ ಅಥವಾ ಸುಖಾಸನದಲ್ಲಿಯೋ ಕುಳಿತಿರುತ್ತಾನೆ. ಅಪ್ಸರೆಯರು ಇವನ ಎರಡೂ ಕಡೆಯಲ್ಲಿ ನಿಂತು ಚೌರಿಯನ್ನು ಬೀಸುತ್ತಾ ಗಾಳಿಯನ್ನು ಹಾಕುತ್ತಿರುತ್ತಾರೆ. ವೀರಗಲ್ಲುಗಳ ಶಿಲ್ಪದಲ್ಲಿ, ವೀರನು ದೇವರ ಸಾಮೀಪ್ಯ ಪದವಿಯನ್ನು ಹೊಂದಿರುವಂತೆ ಬಿಡಿಸಲಾಗಿರುವುದನ್ನು ಗಮನಿಸಬಹುದು. ವೀರನು ಸೇರಿದ ಮತದ ದೇವರ ಸಾನಿಧ್ಯದಲ್ಲಿ ಅವನಿರುವಂತೆ ಶಿಲ್ಪವನ್ನು ಬಿಡಿಸಲಾಗಿರುತ್ತದೆ.

**3. ತುರುಗೊಳ್ ಸ್ಮಾರಕ ಶಿಲ್ಪಗಳು:**

ಪ್ರಾಚೀನ ಕರ್ನಾಟಕದ ಯುದ್ಧಗಳಲ್ಲಿ ತುರುಗೋಳ್ ಬಹಳ ಪ್ರಸಿದ್ಧವಾದ ಯುದ್ಧವಾಗಿತ್ತು. ಕೆಲವು ವೀರರು, ಕಳ್ಳರು ಒಂದು ಗ್ರಾಮದ ಅಥವಾ ಒಬ್ಬ ವ್ಯಕ್ತಿಯ ದನಗಳನ್ನು ಅಪಹರಿಸುವ ಘಟನೆಗೆ ತುರುಗೋಳ್ ಎಂದು ಕರೆಯಲಾಗಿದೆ. ಘಟನೆಯನ್ನಷ್ಟೇ

ಅಲ್ಲದೆ ಈ ಕಾರಣಕ್ಕೆ ನಡೆಯುವ ಯುದ್ಧವನ್ನು ಅಥವಾ ಸಂಘರ್ಷವನ್ನೂ 'ತುರುಗೋಳ್' ಎಂದು ಕರೆಯಲಾಗಿದೆ. ತುರು ಕೊಳ್ ಅಂದರೆ ದನಗಳನ್ನು ತೆಗೆದುಕೊ, ಹಿಡಿದುಕೊ ಎಂದು ಅರ್ಥ. ಇಂತಹ ಸಮಯದಲ್ಲಿ ತುರುಗಳ ರಕ್ಷಣೆಗೆ ಹೋರಾಡದವನು ಹೇಡಿಯೆನಿಸಿಕೊಳ್ಳುತ್ತಿದ್ದನು. ಕನ್ನಡದ ಕವಿ ರನ್ನನು ತನ್ನ ಗದಾಯುದ್ಧ ಕಾವ್ಯದಲ್ಲಿ:

**ತುರುಗೋಳೊಳ್ ಪೆಣ್ಬುಯ್ಯಲೊ**
**ಳೆರೆವೆಸದೊಳ್ ನಂಟನೆಡರೊಳೂರಳಿವಿನೊಳಂ॥**
**ತರೆಸಂದು ಗಂಡುತನಮನೆ**
**ನೆರೆಪದವಂ ಗಂಡನಲ್ಲನೆಂತುಂ ಷಂಡಂ॥**

ತುರುಗಾಳಗಗಳನ್ನು ನಾವು ಕೇವಲ ಒಂದು ಯುದ್ಧದ ಪ್ರಭೇದವೆಂದೂ ಪರಿಗಣಿಸಬಾರದು. ಇದು ಗ್ರಾಮ ಸಮಾಜ ಮತ್ತು ಆರ್ಥಿಕ ವ್ಯವಸ್ಥೆಯ ನಡುವಿನ ಸಂಬಂಧವನ್ನು ಪ್ರತಿಬಿಂಬಿಸುತ್ತದೆ. ಒಬ್ಬರ ಬಳಿ ಲಕ್ಷಾಂತರ ದನಗಳಿವೆಯೆಂದರೆ ಅವುಗಳ ಪಾಲನೆ ಪೋಷಣೆ ಸುಲಭದ ಮಾತಲ್ಲ. ಇವು ಆಯಾ ಕುಟುಂಬಗಳ ಮತ್ತು ಗ್ರಾಮ ಸಮುದಾಯಗಳ ಆರ್ಥಿಕ ಮೂಲಗಳೂ ಆಗಿದ್ದವು. ಈ ಆರ್ಥಿಕ ಮೂಲಗಳು ಕೆಲವು ವೇಳೆ ವೈಷಮ್ಯಕ್ಕೆ ಕಾರಣವಾಗಿ ಸಂಘರ್ಷಗಳಾಗಿರಬಹುದು.

ತುರುಗೋಳ್ ಶಿಲ್ಪದ ಬೆಳವಣಿಗೆ ಬಹಳ ಪ್ರಾಚೀನ ಕಾಲಕ್ಕೆ ಹೋಗುತ್ತದೆ. ಇದರ ಮೂಲವನ್ನು ಮಹಾಭಾರತದಿಂದ ಗುರುತಿಸಬಹುದು. ವೀರರಾದ ಪಾಂಡವರನ್ನು ಪ್ರಕಟಗೊಳಿಸುವಲ್ಲಿ ಕೌರವನು ವಿರಾಟನ ಗೋವುಗಳನ್ನು ಅಪಹರಿಸಿದ ಕಾಳಗ 'ತುರುಗೋಳ್' ಯುದ್ಧವೇ ಆಗಿದ್ದು, ನಮ್ಮ ದೇಶದಲ್ಲಿ ತುರುಗೋಳ್ ಯುದ್ಧಘಟನೆ ಅಷ್ಟು ಪ್ರಾಚೀನಕ್ಕೆ ಹೋಗುತ್ತದೆ ಎಂದು ಅರಿಯಬಹುದಾಗಿದೆ.

### 4. ಪೆಣ್ಬುಯ್ಯಲ್ ಕಾಳಗದಲ್ಲಿ ಮಡಿದವರ ಶಿಲ್ಪಗಳು:

ಪೆಣ್ಬುಯ್ಯಲ್ ಶಬ್ದದ ಅರ್ಥ: 'ಪೆಣ್ಬುಯ್ಯಲ್' ಎಂಬ ಪದವು ಪೆಣ್-ಪುಯ್ಯಲ್ ಎಂಬ ಎರಡು ಶಬ್ದಗಳಿಂದ ಕೂಡಿದ್ದು. ನಮ್ಮ ಪ್ರಾಚೀನ ಯುದ್ಧ ವ್ಯವಸ್ಥೆಯಲ್ಲಿ ವೀರತನದಿಂದ ಹೋರಾಡುವುದು ಮತ್ತು ಪ್ರಾಣವನ್ನು ಲೆಕ್ಕಿಸದೆ ತಮ್ಮವರನ್ನು ರಕ್ಷಿಸುವುದು ಒಂದು ಮೌಲ್ಯವೇ ಆಗಿತ್ತು. ಶತ್ರುಗಳು ದಾಳಿ ಮಾಡಿದಾಗ ಅಲ್ಲದೆ ಕೆಲವು ವೇಳೆ ಸ್ತ್ರೀಯರನ್ನು ಅಪಮಾನಿಸುವಂತಹ ಘಟನೆಗಳೂ ಜರುಗುತ್ತಿದ್ದವು. ಇಂತಹ ಸಮಯದಲ್ಲಿ ಅನೇಕರು ತಮ್ಮ ಪ್ರಾಣವನ್ನು ಪಣಕ್ಕಿಟ್ಟು ಶತ್ರುಗಳೊಂದಿಗೆ ಹೋರಾಡಿ ಆಪತ್ತಿಗೆ ಒಳಗಾದ ಸ್ತ್ರೀಯರನ್ನು ರಕ್ಷಿಸುತ್ತಿದ್ದರು. ಹೀಗೆ ರಕ್ಷಿಸಲು ಹೋರಾಡಿ ಮಡಿದ ವೀರರ ವಿಷಯವನ್ನು ದಾಖಲಿಸಿರುವ ಅನೇಕ ವೀರಗಲ್ಲುಗಳು ನಮಗೆ ದೊರೆಯುತ್ತವೆ. ಇವುಗಳಲ್ಲದೆ, ಬೇಟೆಯಾಡುವ ಸ್ಮಾರಕ ಶಿಲ್ಪ, ಊರಳಿವಿನ ಸಂದರ್ಭದಲ್ಲಿ ಮಡಿದವರ ಶಿಲ್ಪಗಳು, ಕೋಟೆ ಕಾಳಗದ ಶಿಲ್ಪಗಳು, ಗಡಿ ಕಾಳಗದಲ್ಲಿ ಮಡಿದವರ ಸ್ಮಾರಕ ಶಿಲ್ಪಗಳು ನಮಗೆ ಶೂರತನದ ಮಾಹಿತಿಯನ್ನು ನೀಡುತ್ತವೆ.

### 5. ದಾನ ಶಾಸನ ಶಿಲ್ಪಗಳು:

ದಾನ ಶಾಸನ ಶಿಲ್ಪಗಳು ಈ ಹಿಂದೆ ಆಳಿದ ಅರಸು ಮನೆತನಗಳು ಹೊರಡಿಸಿದ ಆದೇಶಗಳಾಗಿವೆ. ವಿವಿಧ ಕೆಲಸ ಕಾರ್ಯಗಳಿಗಾಗಿ ನೀಡಿದ ದಾನ-ದತ್ತಿಗಳ ಕುರಿತು ಮಾಹಿತಿಯನ್ನು ನೀಡುತ್ತವೆ. ಸಾಮಾನ್ಯವಾಗಿ ಇವುಗಳನ್ನು 1) ಜೈನ ದಾನ ಶಾಸನ ಶಿಲ್ಪ 2) ಶೈವ ದಾನ ಶಾಸನ ಶಿಲ್ಪ 3) ವೈಷ್ಣವ ದಾನ ಶಾಸನ ಶಿಲ್ಪ ಎಂದು ಧಾರ್ಮಿಕ ದೃಷ್ಟಿಯಿಂದ ಮೂರು ವಿಭಾಗಗಳನ್ನಾಗಿಯೂ, 4) ಧರ್ಮ ಸಮನ್ವಯ ಶಾಸನ ಶಿಲ್ಪ ಎಂದು 5)

ಗೋಸಹಸ್ರ ದಾನ ಶಾಸನ ಶಿಲ್ಪಗಳೆಂದೂ ವಿಂಗಡಿಸಲಾಗುತ್ತದೆ.

**6. ಬಲಿದಾನ ಶಾಸನ ಶಿಲ್ಪ:**

ಧರ್ಮಕ್ಕಾಗಿ, ಆತ್ಮ ತೃಪ್ತಿಗಾಗಿ ಅಥವಾ ತನ್ನ ನಿಷ್ಠೆಯನ್ನು ಪ್ರದರ್ಶಿಸುವ ಸಲುವಾಗಿ, ಅಥವಾ ತಾನು ನಂಬಿದ ಪ್ರೀತಿಯ ವಸ್ತುವಿನ ಅಗಲಿಕೆಯನ್ನು ತಡೆಯಲಾರದೆ ವ್ರತಗಳನ್ನು ಸ್ವೀಕರಿಸಿಯೋ, ಬೆಂಕಿಗೆ ಹಾರಿಯೋ ಅಥವಾ ತಮ್ಮನ್ನು ತಾವೇ ಇರಿದುಕೊಂಡು ಪ್ರಾಣವನ್ನು ಕಳೆದುಕೊಳ್ಳುತ್ತಿದ್ದರು. ಈ ರೀತಿ ಆತ್ಮಾರ್ಪಣೆ ಮಾಡಿಕೊಳ್ಳುವುದು ಅವರಿಗೆ ಬಹಳ ಇಷ್ಟವಾದ ಮತ್ತು ಪರಮ ಪುಣ್ಯದ ಸನ್ನಿವೇಶವಾಗುತ್ತಿತ್ತು. ಧರ್ಮದ ಪ್ರೇರಣೆಯಿಂದ ಕೈಗೊಂಡ ಆತ್ಮಾರ್ಪಣೆಯ ಸ್ಮಾರಕ ಶಿಲ್ಪಗಳನ್ನು ಧಾರ್ಮಿಕ ಆತ್ಮಬಲಿ ಶಾಸನ ಶಿಲ್ಪಗಳೆಂದು, ಲೌಕಿಕ ಪ್ರೇರಣೆಯಿಂದ, ಸಾಮಾಜಿಕ ನೀತಿ ನಿಯಮದ ಪ್ರೇರಣೆಯಿಂದ ಕೈಗೊಂಡ ಆತ್ಮಾರ್ಪಣೆಯನ್ನು ಲೌಕಿಕ ಬಲಿದಾನ ಅಥವಾ ಲೌಕಿಕ ಆತ್ಮಬಲಿ ಶಾಸನ ಶಿಲ್ಪಗಳೆಂದೂ ವಿಂಗಡಿಸಬಹುದು.

ಧಾರ್ಮಿಕ ಬಲಿದಾನ: ದೈವವನ್ನು ಗುರಿಯಿಟ್ಟು ನಡೆಸುವ ಆತ್ಮಾನುಸಂಧಾನದಿಂದ ಸದ್ಗತಿ ಸಾಧ್ಯವೆಂದು ಭಾವಿಸಿದ ಹಿಂದೂಗಳು, ದೇವರಿಗಾಗಿ ಕೈಗೊಳ್ಳುವ ಬಲಿದಾನದಿಂದಲೂ ಸದ್ಗತಿ ಸಾಧ್ಯವೆಂದು ನಂಬಿದುದು,'ಧಾರ್ಮಿಕ ಸಂದರ್ಭ'ಗಳಲ್ಲಿ ಆತ್ಮಾರ್ಪಣೆ ಮಾಡಿಕೊಳ್ಳುವ ಸಂಪ್ರದಾಯಕ್ಕೆ ದಾರಿ ಮಾಡಿಕೊಟ್ಟಿತು. ಇತರ ಧರ್ಮಗಳಲ್ಲಿಯೂ ನಾವು ಇದೇ ಅಂಶವನ್ನು ಮನಗಾಣಬಹುದು. ಈ ವಿಭಾಗದಲ್ಲಿ ನಿಶಿಧಿ ಶಿಲ್ಪ, ಸೂರ್ಯಗ್ರಹಣ ಸಾವಿನ ಶಿಲ್ಪ, ಹರಕೆ ಸಾವಿನ ಶಿಲ್ಪ ಎಂದು ಮೂರು ಭಾಗ ಮಾಡಬಹುದು. ಕರ್ನಾಟಕದಲ್ಲಿ ಜರುಗಿದ ಇಂತಹ ಮರಣದ ಏಕೈಕ ಉಲ್ಲೇಖವೆಂದರೆ ಕಲ್ಯಾಣ ಚಾಲುಕ್ಯರ ಚಕ್ರವರ್ತಿ ಅಹವಮಲ್ಲನು ಕುರುಗೋಡದ ಸಮೀಪ ತುಂಗಭದ್ರೆಯನ್ನು ಪ್ರವೇಶಿಸಿ ಪ್ರಾಣಬಿಟ್ಟರು.

ನಿಶಿಧಿ ಶಿಲ್ಪ: ಸನ್ಯಸನ, ಸಮಾಧಿ, ಸಲ್ಲೇಖನ ಮುಂತಾದ ವ್ರತಪಂಥಗಳನ್ನು ಅನುಸರಿಸಿ ದೇಹತ್ಯಾಗ ಮಾಡಿದವರ ಸ್ಮರಣಾರ್ಥ ನಿರ್ಮಿಸಿದ ಸ್ಮಾರಕಗಳನ್ನು ನಿಶಿಧಿಗಳೆಂದು ಕರೆಯಲಾಗುತ್ತದೆ. ಮಡಿದವರ ಸ್ಮಾರಕವಾಗಿ ವೀರರಿಗೆ ವೀರಗಲ್ಲುಗಳನ್ನು ಸ್ಥಾಪಿಸುತ್ತಿದ್ದಂತೆ ಕೆಲವು ಸ್ಮಾರಕಗಳನ್ನು ನಿಲ್ಲಿಸುತ್ತಿದ್ದರು. ಇವುಗಳನ್ನು 'ನಿಶಿಧಿಕಲ್ಲು'ಗಳೆಂದು ಕರೆಯುತ್ತಾರೆ. ಇವುಗಳಲ್ಲಿ ಬಂಡೆಗಲ್ಲು ಸ್ಮಾರಕ, ಸ್ತಂಭ ಸ್ಮಾರಕ, ದೇವಾಲಯದಲ್ಲಿನ ಸ್ತಂಭ ಸ್ಮಾರಕ, ಮಂಟಪ ಸ್ಮಾರಕ, ಮೂರ್ತಿ ಮತ್ತು ರಚನಾತ್ಮಕ ಸ್ಮಾರಕಗಳೆಂಬ ನಿಶಿಧಿಗಳಿವೆ. ಇಂತಹ ನೂರಾರು ನಿಶಿಧಿಗಳು ಶ್ರವಣಬೆಳಗೊಳದಲ್ಲಿ ನಮಗೆ ಕಂಡುಬರುತ್ತವೆ.

ಧಾರ್ಮಿಕ ದೇಹತ್ಯಾಗ ಅಥವಾ ಆತ್ಮಬಲಿ: ಧಾರ್ಮಿಕ ದೇಹತ್ಯಾಗಗಳು ಜೈನರಲ್ಲಿ ವಿಶೇಷವಾಗಿದ್ದವು. ಅವು ಜೈನ ಧರ್ಮದ ವೈಶಿಷ್ಟ್ಯವೂ ಹೌದು. ಅವುಗಳನ್ನು ಸಮಾಧಿ ಮರಣಗಳೆಂದೂ, ಸಲ್ಲೇಖನ ವ್ರತವೆಂದೂ ಕರೆಯುತ್ತಾರೆ. ಸಮಾಧಿ ಮರಣ ಹೊಂದಿದ ನೂರಾರು ಹೆಸರುಗಳು ಶ್ರವಣಬೆಳಗೊಳದ ಶಾಸನಗಳಲ್ಲಿ ಕಂಡುಬರುತ್ತವೆ. ವ್ಯಕ್ತಿಗೆ ಜೀವನವು ಅಶಾಶ್ವತವೆಂದು ಕಂಡುಬಂದರೆ, ಕ್ಷಯಿಸಬೇಕಾದ ತನ್ನ ಕರ್ಮದ ಹೊರೆ ದೊಡ್ಡದು ಎಂದು ಅನ್ನಿಸಿದರೆ, ಅಪರಿಹಾರ್ಯವಾದ ಮಹಾರೋಗದಿಂದ ಪೀಡಿತನಾದರೆ ಆಗ ಯಾವಜ್ಜೀವವೂ ಆಹಾರವನ್ನು ತೊರೆದು ವ್ರತಧಾರಿಯಾಗುತ್ತಿದ್ದನು. ಆ ವ್ರತವನ್ನು ತಾಳಿ ದೇಹತ್ಯಾಗ ಮಾಡಿದವರ ಸ್ಮಾರಕವಾಗಿ, ಅವರ ಯಾವ ಸ್ಥಳದಲ್ಲಿ ಕುಳಿತು ದೇಹ ತ್ಯಾಗಮಾಡಿದರೋ ಅಲ್ಲಿ ಆ ವ್ಯಕ್ತಿಯ ಗುಣಗಾನ ಮಾಡುವ ಶಾಸನಗಳನ್ನು ಬರೆಸುತ್ತಿದ್ದರು. ಇವುಗಳನ್ನೇ ನಿಷಿಧಿಕಾ, ನಿಸಧಿಗಲ್ಲು ಎಂದು ಕರೆದಿರುವುದು.

ಹರಕೆ ಬಲಿದಾನ ಶಾಸನ ಶಿಲ್ಪ: ತನ್ನ ಕೋರಿಕೆಯನ್ನು ಈಡೇರಿಸಲು ಮನುಷ್ಯನು

ದೇವರಿಗೆ ಹರಕೆಯನ್ನು ಒಪ್ಪಿಸುವುದು ಈಗಲೂ ಪ್ರಚಲಿತದಲ್ಲಿರುವ ವಿಷಯವಾಗಿದೆ. ದೇವರಿಂದ ಸೃಷ್ಟಿಯಾದ ಈ ಜೀವ ಮತ್ತೆ ದೇವರ ಸನ್ನಿಧಿಗೆ ಹೋಗಲಿ ಎಂದು ಅವರು ನಂಬಿದ್ದರು. ತಮ್ಮ ಪ್ರಾಣವನ್ನು ಬಲಿಕೊಡುವ ವಿಧಾನಗಳನ್ನು ಹಲವಾರು ರೀತಿಯಲ್ಲಿ ಆಚರಿಸುತ್ತಿದ್ದರು. ಸೂರ್ಯ ಗ್ರಹಣದ ದಿನ ಬಲಿಯಾಗುವುದು, ಸಿಡಿತಲೆ ಬಲಿ, ಶೂಲ ಬಲಿ, ಉರಿ ಉಯ್ಯಾಲೆ ಬಲಿ ಹೀಗೆ ಹಲವು ರೀತಿಯ ಹರಕೆ ಬಲಿಯ ವಿಧಾನಗಳನ್ನು ಈ ಕೆಳಗಿನಂತೆ ಗಮನಿಸಬಹುದು.

ಇವುಗಳಲ್ಲದೆ ಸೂರ್ಯಗ್ರಹಣ ಬಲಿದಾನ ಶಿಲ್ಪ, ಉರಿ ಉಯ್ಯಾಲೆ ಶಾಸನ ಶಿಲ್ಪ, ಶೂಲಬಲಿ, ಶಿರಬಲಿ, ಸಿಡಿತಲೆ ಶಾಸನ ಶಿಲ್ಪಗಳಂತಹ ಸ್ಮಾರಕಗಳೂ ಸಹ ನಮಗೆ ಕರ್ನಾಟಕದಾದ್ಯಂತ ಕಂಡುಬರುತ್ತವೆ.

ಲೌಕಿಕ ಬಲಿದಾನದ ಶಾಸನ ಶಿಲ್ಪ: ಆಮೇಲೆ ಪ್ರಿಯ ವ್ಯಕ್ತಿಯ ಹೆಸರಿನಲ್ಲಿ ಪ್ರಾಣೋತ್ಕ್ರಮಣ ಮಾಡಿಕೊಳ್ಳುವ ಲೌಕಿಕ ಬಲಿದಾನಕ್ಕೆ ದಾರಿ ಮಾಡಿಕೊಟ್ಟಿತೆಂದು ತೋರುತ್ತದೆ. ಪತಿಯ ಮರಣದ ನಂತರ ಸತಿ ಹೋಗುವುದು, ಪ್ರಿಯ ವ್ಯಕ್ತಿಯ ಮರಣದ ನಂತರ ತಾನೂ ಮರಣವನ್ನಪ್ಪುವುದು, ಪ್ರಿಯ ವ್ಯಕ್ತಿಗೆ ಒಳಿತಾಗಲಿ ಎಂದು ಪ್ರಾಣ ಅರ್ಪಿಸುವುದು ಮೊದಲಾದ ಆಚರಣೆಗಳು ಲೌಕಿಕ ಬಲಿದಾನಗಳು ಎನ್ನಿಸಿಕೊಳ್ಳುತ್ತವೆ.

**7. ಮಾಸ್ತಿ ಸ್ಮಾರಕ ಶಿಲ್ಪಗಳು:**

ಪ್ರಾಚೀನ ಕಾಲದಲ್ಲಿ ಸತಿ ಆಚರಣೆ ರೂಢಿಯಲ್ಲಿತ್ತು. ಪತಿಯು ಕಾರಣಾಂತರಗಳಿಂದ ಮಡಿದಾಗ ಅವನ ಸತಿಯೂ ಕೂಡ ಬೆಂಕಿಗೆ ಬಿದ್ದು ಪ್ರಾಣವನ್ನು ಅರ್ಪಿಸುತ್ತಿದ್ದಳು. ಹೀಗೆ ಮಹಾಸತಿಯಾದವರ ಸ್ಮಾರಕವಾಗಿ ನಿಲ್ಲಿಸಿದ ಕಲ್ಲುಗಳೇ ಮಾಸ್ತಿಗಲ್ಲುಗಳು. ಸಾಮಾನ್ಯವಾಗಿ ಮಾಸ್ತಿಗಲ್ಲುಗಳ ಮೇಲೆ ಸ್ತ್ರೀಯ ಚಿತ್ರವಿರುತ್ತದೆ. ಅವುಗಳ ಸ್ವರೂಪವನ್ನು ನೋಡುವುದಾದರೆ, ಎತ್ತಿದ ಬಲದೋಳು ಶಿಲ್ಪ, ಎತ್ತಿದ ಬಲದೋಳಿನ ಸ್ತ್ರೀ ಶಿಲ್ಪ, ಪತಿಯೊಂದಿಗೆ ನಿಂತು ಎತ್ತಿದ ಬಲದೋಳಿನ ಸ್ತ್ರೀ ಶಿಲ್ಪ. ಇವು ಕೆಲವೊಮ್ಮೆ ಕಂಬದಿಂದ ಹೊರಟಿರುವಂತೆ ಚಿತ್ರಿತವಾಗಿರುತ್ತವೆ. ಹಳ್ಳಿಗಳಲ್ಲಿ ಭ್ರಾಂತಿಯಿಂದ ಇವುಗಳನ್ನು ವ್ಯಾಸನ ತೋಳುಗಳೆಂದು ಕರೆಯುತ್ತಾರೆ. ಪತಿಯೊಂದಿಗಿನ ಸ್ತ್ರೀ ವಿಗ್ರಹಗಳೂ ಅಲ್ಲಲ್ಲಿ ಸಿಗುತ್ತವೆ. ಇಲ್ಲಿ ಪತಿಯ ಎಡಗಡೆ ನಿಂತು ಸತಿ ಬಲಗೈ ಎತ್ತಿರುತ್ತಾಳೆ. ದಂಪತಿಗಳು ಪರಸ್ಪರ ಹೆಗಲ ಮೇಲೆ ಕೈ ಹಾಕಿರುವ ಚಿತ್ರಣಗಳೂ ಕಾಣಸಿಗುತ್ತವೆ. ಅವಳ ಬಲಗೈ ಗಂಡನ ಹೆಗಲ ಮೇಲಿರುವ ಕಾರಣ ಎತ್ತಿದ ಬಲಗೈಯೊಂದನ್ನು ಪ್ರತ್ಯೇಕ ಬಿಡಿಸಿರುತ್ತಾರೆ. ಪತಿಯ ಚಿತ್ರ ಆಯುಧವನ್ನು ಹಿಡಿದಿದ್ದರೆ ಅದು ವೀರಮರಣವನ್ನು ಸಂಕೇತಿಸುತ್ತದೆ. ಇವುಗಳನ್ನು ಒಕ್ಕೆ ಮಸ್ತಿ ಮತ್ತು ಇಕ್ಕೆ ಮಸ್ತಿಗಳೆಂದು ವಿಭಾಗಿಸಲಾಗಿದೆ.

**8. ಸ್ಮಾರಕ ಶಿಲ್ಪಗಳಲ್ಲಿ ಕಂಡುಬರುವ ಪ್ರಮುಖ ಅಂಶಗಳು:**

ಉಡಿಗೆ ತೊಡಿಗೆ: ಸಾಮಾನ್ಯವಾಗಿ ಸ್ಮಾರಕ ಶಿಲ್ಪಗಳಲ್ಲಿ ವೀರ, ಸತಿ, ಯತಿಗಳು, ಅಪ್ಸರೆಯರು ಮತ್ತು ಇತರ ವ್ಯಕ್ತಿಗಳು ವಿವಿಧ ಮಾದರಿಯಲ್ಲಿ ಉಡಿಗೆ ತೊಡಿಗೆಗಳನ್ನು ಧರಿಸಿರುವುದು ನಮಗೆ ಕಂಡುಬರುತ್ತದೆ. ಸಾಮಾನ್ಯವಾಗಿ ಮಾಸ್ತಿ ಶಿಲ್ಪದಲ್ಲಿ ಸತಿಯು ಲಂಗದಂತಹ ಉಡಿಗೆಯನ್ನು ಧರಿಸಿದ್ದಾಳೆ. ಅದಕ್ಕೆ ವಿವಿಧ ರೀತಿಯ ನೆರಿಗೆಗಳಿರುತ್ತವೆ. ಅವು ಪಾದದವರೆಗೆ ಇಳಿಬಿದ್ದಿವೆ. ಮಧ್ಯದಲ್ಲಿ ಹಾಗೂ ಕೆಳಗಿನ ಅಂಚಿನಲ್ಲಿ ಗೆರೆಗಳನ್ನು ಹಾಕಿರುವಂತೆ ಕಂಡರಿಸಲಾಗಿರುತ್ತದೆ. ಇದಕ್ಕೆ ಸೊಂಟದಲ್ಲಿ ಬಿಗಿಯಾದ ಪಟ್ಟಿಯನ್ನು ಕಟ್ಟಿಕೊಂಡಿದ್ದಾಳೆ. ಇದರ ಒಂದು ತುದಿ ಬಲಭಾಗದಲ್ಲಿ ಹೊರಚಾಚಿ ಗಾಳಿಗೆ ಹಾರಾಡುತ್ತಿರುವಂತೆ ಕಾಣುತ್ತದೆ. ಕಾರಲಗಾ ಗ್ರಾಮದ ಶಿಲ್ಪದಲ್ಲಿ ಯತಿಗಳು ಶಿವಲಿಂಗವನ್ನು ಪೂಜಿಸುತ್ತಿದ್ದಾರೆ. ಅವರು

ಚಿಕ್ಕದಾದ ಲಂಗೋಟಿ ಮಾದರಿಯ ಉಡುಪನ್ನು ಧರಿಸಿದ್ದಾರೆ. ಇಲ್ಲಿಯೇ ಇರುವ ಮತ್ತೊಂದು ಶಿಲ್ಪದಲ್ಲಿ ಯತಿಗಳು ಧೋತಿಯಂತಹ ಉಡಿಗೆಯನ್ನು ಧರಿಸಿದ್ದಾರೆ. ಅದಕ್ಕೆ ನೆರಿಗೆಗಳಿದ್ದು, ಮುಂಭಾಗದಲ್ಲಿ ಚಿಕ್ಕದಾದ ಕುಚ್ಚನ್ನು ರಚಿಸಲಾಗಿದೆ. ಬೇಕವಾಡದ ಶಿಲ್ಪದಲ್ಲಿ ಮೊಣಕಾಲಿನವರೆಗೆ ಇರುವ ಧೋತಿಯನ್ನು ಧರಿಸಿದ್ದಾನೆ. ಸೊಂಟದಲ್ಲಿ ಅದಕ್ಕೆ ಬಟ್ಟೆಯ ಪಟ್ಟಿಯೊಂದನ್ನು ಕಟ್ಟಿಕೊಂಡಿದ್ದಾನೆ. ಮುಂಭಾಗದಲ್ಲಿ ಆಕರ್ಷಕವಾದ ಕುಚ್ಚವಿದೆ. ತೊಡೆಯ ಇಕ್ಕೆಲಗಳಲ್ಲಿ ಮಣಿಗಳಿಂದ ಅಲಂಕೃತವಾದ ಒಂದೆಳೆಯ ಸರವನ್ನು ಹಾಕಿಕೊಂಡಿದ್ದಾನೆ. ಇಲ್ಲಿಯೇ ಇರುವ ಮತ್ತೊಂದು ವೀರ ಮಾಸ್ತಿ ಶಿಲ್ಪದಲ್ಲಿ ವೀರ ತೊಂಡುಡುಗೆಯನ್ನು ಧರಿಸಿದ್ದು, ವೀರಗಚ್ಚೆಯನ್ನು ಹಾಕಿದ್ದಾನೆ. ಸೊಂಟದಲ್ಲಿ ಬಟ್ಟೆಯ ಪಟ್ಟಿಯೊಂದನ್ನು ಬಿಗಿದುಕೊಂಡಿದ್ದು, ಮುಂಭಾಗದಲ್ಲಿ ಚಿಕ್ಕದಾದ ಕುಚ್ಚಿನ ರೀತಿಯ ರಚನೆಗಳಿವೆ.

ಆಭರಣಗಳು: ನಾವು ಎಲ್ಲ ಸ್ಮಾರಕ ಶಿಲ್ಪಗಳನ್ನು ಗಮನಿಸಿದಾಗ ಅವುಗಳಲ್ಲಿ ವಿವಿಧ ಪಾರಂಪರಿಕ ಸಾಂಸ್ಕೃತಿಕ ಅಂಶಗಳನ್ನು ಗುರುತಿಸಬಹುದಾಗಿದೆ. ಅವುಗಳಲ್ಲಿ ಆಭರಣಗಳು ಪ್ರಮುಖವಾಗಿವೆ. ಕೊರಳ ಆಭರಣಗಳಾದ ಕಂಠಿಹಾರ, ಮುತ್ತಿನ ಸರಗಳನ್ನು ಬಹುತೇಕ ಶಿಲ್ಪಗಳಲ್ಲಿ ಕಂಡುಬರುತ್ತವೆ. ಇವುಗಳ ಜೊತೆಗೆ ತೋಳಿನ ಆಭರಣಗಳು, ಬಳೆ, ಕಡಗಗಳನ್ನು ಸಹ ಗಮನಿಸಬಹುದು. ಅಲ್ಲದೆ ಕುಚಬಂಧ ಮತ್ತು ಕಟೀಬಂಧ ಮತ್ತು ಛನ್ನವೀರಗಳಂತಹ ಆಭರಣಗಳನ್ನು ಧರಿಸುತ್ತಿದ್ದರು. ಛನ್ನವೀರ ಎಂದರೆ, ಎದೆಯ ಭಾಗದಲ್ಲಿ ಹಾಕಿಕೊಳ್ಳಬಹುದಾದ ಆಭರಣವಿದು. ಇದನ್ನು ಮಕುಟ ಅಥವಾ ಕುತ್ತಿಗೆಯ ಕೆಳಗೆ ಎದೆಯ ಭಾಗದಲ್ಲಿ ಅಂದರೆ ದೇಹದ ಮಧ್ಯದಲ್ಲಿ ಕತ್ತರಿಯಾಕಾರದಲ್ಲಿ ಧರಿಸುತ್ತಿದ್ದರು. ಕಿವಿಯ ಆಭರಣಗಳಾದ, ಓಲೆ, ಜುಮಕಿ, ಲೋಲಕು, ಕುಂಡಲಿ, ರಿಂಗು, ನಕ್ಷತ್ರ ಕುಂಡಲಗಳು ಸಾಮಾನ್ಯವಾಗಿದ್ದವು. ಕಾಲಿನ ಆಭರಣಗಳಾದ ಕಾಲ್ಗಡಗ, ಗೆಜ್ಜೆ ಮತ್ತು ಗಂಡ ಪೆಂಡೇರಗಳನ್ನು ಹಾಕಿಕೊಳ್ಳುತ್ತಿದ್ದರು. ಕಾದರೊಳ್ಳಿಯ ಶಿಲ್ಪದಲ್ಲಿ ಸತಿ ಮತ್ತು ವೀರ ಇಬ್ಬರೂ ಕಾಲಿನಲ್ಲಿ ಗೆಜ್ಜೆಯನ್ನು (ನೂಪುರ) ಕಟ್ಟಿಕೊಂಡಿದ್ದಾರೆ. ಇದರ ಕೆಳಗಿನ ಭಾಗದಲ್ಲಿ ಅಲಂಕೃತವಾದ ಕಾಲ್ಗಡಗಳಿವೆ. ಗಂಡ ಪೆಂಡೇರ ಎಂದರೆ, ಚಿನ್ನದಿಂದ ತಯಾರಿಸುತ್ತಿದ್ದ ಆಭರಣ. ಹಾಗೆಯೇ ಹಣೆಸರ, ಬೈತಲೆ ಮಣಿ, ಕಿರೀಟ ಮತ್ತು ಯಜ್ಞೋಪವೀತಗಳು ಸಾಮಾನ್ಯವಾಗಿದ್ದವು. ಯಜ್ಞೋಪವೀತವನ್ನು ಪವಿತ್ರದಾರ ಎಂದು ಪರಿಗಣಿಸಲ್ಪಟ್ಟಿದ್ದು, ಸಾಮಾನ್ಯವಾಗಿ ಪುರುಷರು (ದ್ವಿಜರು) ಧರಿಸಿರುವುದು ಗುಪ್ತರ ಹಾಗೂ ತದನಂತರದ ಶಿಲ್ಪಗಳಲ್ಲಿ ಕಂಡುಬರುತ್ತವೆ. ಮಧ್ಯಯುಗದ ಕಾಲದಲ್ಲಿ ಇದನ್ನು ಮುತ್ತು ರತ್ನಗಳು ಮತ್ತು ಹತ್ತಿಯ ದಾರದಿಂದ ಮಾಡಿರುತ್ತಿದ್ದರು. ಇದನ್ನು ದೇವಾನುದೇವತೆಗಳ ಮತ್ತು ಸಾಮಾನ್ಯ ಶಿಲ್ಪಗಳಲ್ಲಿ ಗಮನಿಸಬಹುದು. ಶಿವ ಹಾವನ್ನೇ ತನ್ನ ಕಟೀಭೂಷಣ ಮತ್ತು ಯಜ್ಞೋಪವೀತವನ್ನಾಗಿ ಮಾಡಿಕೊಂಡಿದ್ದನು. ವಿಷ್ಣುವಿನ ಕೊರಳಲ್ಲಿ ಮತ್ತು ರತ್ನಗಳಿಂದ ಅಲಂಕೃತವಾದ ಯಜ್ಞೋಪವೀತವಿರುವುದು ಕಂಡುಬರುತ್ತದೆ ಮತ್ತು ಸಾಮಾನ್ಯರ ಶಿಲ್ಪದಲ್ಲಿ ನಾವು ದಾರದಿಂದ ಮಾಡಿದ ಯಜ್ಞೋಪವೀತವನ್ನು ಧರಿಸಿರುವುದನ್ನು ಗುರುತಿಸಬಹುದಾಗಿದೆ. ಪಾದಜಾಲಕ ಎಂಬ ಕಾಲಿನಲ್ಲಿ ಹಾಕಿಕೊಳ್ಳುವ ಪಾದರಕ್ಷೆಯ ಮಾದರಿಯ ವಸ್ತುಗಳೂ ಕೂಡ ನಮಗೆ ಸ್ಮಾರಕ ಶಿಲ್ಪಗಳಲ್ಲಿ ಕಂಡುಬರುತ್ತವೆ.

ಕೇಶಾಲಂಕಾರ: ಶಿಲ್ಪಗಳಲ್ಲಿ ಕಂಡುಬರುವ ಮತ್ತೊಂದು ಪ್ರಮುಖವಾದ ಅಂಶವೆಂದರೆ, ಕೇಶಾಲಂಕಾರ. ವೀರ, ಸತಿ, ಅಪ್ಸರೆಯರು, ಯತಿಗಳು ಮತ್ತು ಇತರರು ವಿವಿಧ ಮಾದರಿಯಲ್ಲಿ ತಮ್ಮ ಕೇಶವನ್ನು ಕಟ್ಟಿಕೊಳ್ಳುತ್ತಿದ್ದರು. ಉದಾಹರಣೆಗೆ ಅಸೋಗಾದ ಶಿಲ್ಪದಲ್ಲಿ ಸತಿಯ ಕೇಶವನ್ನು ಹೂವಿನ ದಂಡೆಯಿಂದ ಅಲಂಕರಿಸಿದ್ದು ಹಿಂಭಾಗದಲ್ಲಿ

ಕೇದಿಗೆಯ ದಳಗಳಿಂದ ಅಲಂಕರಿಸಲಾಗಿದೆ. ಇಲ್ಲಿಯೇ ಇರುವ ಮತ್ತೊಂದು ಶಿಲ್ಪದಲ್ಲಿ ಕೇಶವನ್ನು ಮುಂಭಾಗದಲ್ಲಿ ಹೂವಿನ ದಂಡೆಯಿಂದ ಅಲಂಕರಿಸಿದ್ದು, ಹಿಂಭಾಗದಲ್ಲಿ ಕೇದಿಗೆಯ ಐದು ದಳಗಳಿಂದ ಶೃಂಗರಿಸಲಾಗಿದೆ. ದೊಡವಾಡದ ಗ್ರಾಮದ ಸಂಗಪ್ಪಜ್ಜನ ಗುಡಿಯ ಮುಂದಿನ ವೀರಗಲ್ಲು ಶಿಲ್ಪದಲ್ಲಿ ಯತಿಗಳು ಉದ್ದವಾದ ಕೇಶವನ್ನು ಇಳಿಬಿಟ್ಟಿದ್ದು, ಅವು ಸೊಂಟದವರೆಗೆ ಹರಡಿವೆ. ಅಲ್ಲದೆ ಯತಿಗಳು ಗಡ್ಡವನ್ನೂ ಕೂಡ ಬಿಟ್ಟಿರುವ ರಚನೆಯನ್ನು ಕಾಣುತ್ತೇವೆ. ಕಕ್ಕೇರಿಯ ಇಲ್ಲಿನ ಮೂರು ಹಂತದ ವೀರಗಲ್ಲು ಶಿಲ್ಪದಲ್ಲಿ ವೀರ ಹಾಗೂ ಶತ್ರು ಪಡೆಯ ಸೈನಿಕರು ವಿಭಿನ್ನವಾಗಿ ಕೇಶವನ್ನು ಅಲಂಕರಿಸಿಕೊಂಡಿದ್ದಾರೆ. ಕೆಳಗಿನ ಹಂತದ ಶಿಲ್ಪಪಟ್ಟಿಕೆಯಲ್ಲಿ ವೀರ ಮತ್ತು ಇತರರು ಕೇಶವನ್ನು ಬಲಮುರಿಯಾಗಿ ಹಾಗೂ ಹಿಂಬದಿಯಲ್ಲಿ ಬರುವಂತೆ ಕಟ್ಟಿಕೊಂಡಿರುವರು. ಮೇಲಿನ ಪಟ್ಟಿಕೆಯಲ್ಲಿ ವೀರ ಕೂದಲನ್ನು ನೆತ್ತಿಯ ಮೇಲೆ ತುರುಬಿನಾಕಾರದಲ್ಲಿ ಕಟ್ಟಿಕೊಂಡಿದ್ದಾನೆ.

ಸಂಗೀತ ವಾದ್ಯಗಳು: ವಿವಿಧ ಸ್ಮಾರಕ ಶಿಲ್ಪಗಳನ್ನು ಪರಿಶೀಲಿಸಿದಾಗ ಅವುಗಳಲ್ಲಿ ವಿವಿಧ ಮಾದರಿಯ ಸಂಗೀತ ವಾದ್ಯಗಳನ್ನು ಕಂಡಿರಿಸುವುದು ನಮಗೆ ಕಂಡು ಬರುತ್ತದೆ. ಉದಾಹರಣೆಗೆ ದೊಡವಾಡದ ಮೂರು ಹಂತದ ವೀರಗಲ್ಲು ಶಿಲ್ಪದ ಎರಡನೇ ಪಟ್ಟಿಕೆಯಲ್ಲಿ ವೀರನನ್ನು ಅಪ್ಸರೆಯರು ಸ್ವರ್ಗಕ್ಕೆ ಒಯ್ಯುತ್ತಿದ್ದಾರೆ. ಇಲ್ಲಿ ಎಂಟು ಜನರು ಸಂಗೀತ ವಾದ್ಯಗಳನ್ನು ನುಡಿಸುತ್ತಿದ್ದಾರೆ. ಡಮರು, ಮದ್ದಳೆ, ತಾಳ ಮತ್ತು ಕಹಳೆಯನ್ನು ನುಡಿಸುತ್ತಿದ್ದಾರೆ. ಇದೇ ಗ್ರಾಮದ ಮತ್ತೊಂದು ವೀರಗಲ್ಲು ಶಿಲ್ಪದಲ್ಲಿ ಕೂಡ ಸಂಗೀತ ವಾದ್ಯಗಳನ್ನು ನುಡಿಸುತ್ತಿರುವ ಚಿತ್ರಣವಿದೆ. ಅವರೂ ಕೂಡ ತಾಳ ಮತ್ತು ಮದ್ದಳೆಗಳನ್ನು ನುಡಿಸುತ್ತಿರುವರು. ಇಲ್ಲಿಯೇ ಇರುವ ಮತ್ತೊಂದು ವೀರಗಲ್ಲಿನಲ್ಲಿ ಸಹ ಇದೇ ಮಾದರಿಯ ರಚನೆಗಳನ್ನು ಕಾಣುತ್ತೇವೆ. ಆರು ಜನ ಸಂಗೀತಗಾರರು ಮದ್ದಳೆ, ಕಹಳೆ ಮತ್ತು ಜಾಗಟೆಯಂತಹ ವಾದ್ಯಗಳನ್ನು ನುಡಿಸುತ್ತಿದ್ದಾರೆ.

ಶಸ್ತ್ರಾಸ್ತ್ರಗಳು: ವಿವಿಧ ಸ್ಮಾರಕ ಶಿಲ್ಪಗಳಲ್ಲಿ ಹಲವಾರು ಮಾದರಿಯ ಶಸ್ತ್ರಾಸ್ತ್ರಗಳನ್ನು ಕಂಡರಿಸಿರುವುದು ನಮಗೆ ಕಂಡು ಬರುತ್ತದೆ. ಅವುಗಳಲ್ಲಿ ಖಡ್ಗ, ಕಡಿತಲೆ, ಬಾಕು (ಕೈಗತ್ತಿ), ಕಠಾರಿ, ಭರ್ಚಿ, ಕೊಂತ, ಸುರಿಗೆ, ಕರ್ಕಡೆ, ಬಿಲ್ಲು, ಬಾಣಗಳು ಪ್ರಮುಖವೆನ್ನಬಹುದು. ಸಬಳ ಎನ್ನುವುದು ಇದು ಈಟಿಯಂತಹುದೇ ಆಯುಧ. ಇದು ವಿಶೇಷವಾಗಿ ಕೋಟೆ ಕಾಳಗದಲ್ಲಿ ಉಪಯೋಗವಾಗುತ್ತಿದ್ದಂತೆ ಕಾಣುತ್ತದೆ. ಕೊಂತ ಎನ್ನುವುದು ಕತ್ತಿಯಂತಹುದೇ ಒಂದು ಆಯುಧವಿರಬೇಕು. ವೀರನು ಒಂದು ಕೈಯಲ್ಲಿ ಗುರಾಣಿಯನ್ನು ಮತ್ತೊಂದು ಕೈಯಲ್ಲಿ ಕೊಂತವನ್ನು ಹಿಡಿದು ಹೋರಾಡಿದ ವರ್ಣನೆ ಬರುತ್ತದೆ. ಸುರಿಗೆ ಎಂಬುದು ಇದು ಕಬ್ಬಿಣದ ಸಲಾಕೆಯಂತೆ ಉದ್ದವಾಗಿದ್ದು ತಳಭಾಗದಲ್ಲಿ ಹಿಡಿಯಿರುತ್ತದೆ ಎಂದು ವಿದ್ವಾಂಸರೊಬ್ಬರ ಅಭಿಪ್ರಾಯ. ಕರ್ಕಡೆ–ಕಕ್ಕಡೆ ಎನ್ನುವುದು "ಕೈಯಿಂದ ಎಸೆಯುವ ಶೂಲದಂತಹ ಆಯುಧ" ಎಂಬುದಾಗಿ ಡಾ.ಎಂ.ಚಿದಾನಂದ ಮೂರ್ತಿಯವರು ಅಭಿಪ್ರಾಯ ಪಡುತ್ತಾರೆ. ಇವುಗಳ ಜೊತೆಗೆ ರಕ್ಷಣಾ ಉಪಕರಣಗಳಾದ ಗುರಾಣಿ ಮತ್ತು ಕವಚಗಳು ಸಹ ಕಂಡುಬರುತ್ತವೆ.

ಶಾಸನ ಶಿಲ್ಪದಲ್ಲಿ ಕಂಡುಬರುವ ಪ್ರಮುಖ ಸಂಕೇತಗಳು: ಬಹುತೇಕ ಎಲ್ಲ ಮಾಸ್ತಿ ಶಿಲ್ಪದಲ್ಲೂ ಕಳಸ, ಕೈಯಲ್ಲಿ ನಿಂಬೆ ಹಣ್ಣು, ಕೆಲವು ವೇಳೆ ಕನ್ನಡಿ ಹಿಡಿದ ಸ್ತ್ರೀಯರ ಚಿತ್ರವಿರುತ್ತದೆ. ಸ್ತ್ರೀಯು ತನ್ನ ಬಲಗೈಯನ್ನು ಮೇಲಕ್ಕೆ ಎತ್ತಿ ಎಲ್ಲರನ್ನೂ ಹರಸುತ್ತಿರುವ ಶಿಲ್ಪವಿರುತ್ತದೆ. ಕೆಲವು ಪ್ರದೇಶಗಳಲ್ಲಿ ಮಹಾಸತಿ ಘಟನೆಗೆ ಸಂಕೇತವಾಗಿ ಒಂದು ಕಂಬದಿಂದ ಹೊರಟ ತೋಳಿನ ಶಿಲ್ಪವಿರುತ್ತದೆ. ಸತಿಯಾದವಳು ದೈವದತ್ತದ ಹಂತಕ್ಕೆ ಏರಿದ್ದಾಳೆ ಎನ್ನುವುದೇ ಈ ಕಂಬದ ಸೂಚನೆಯಾಗಿದೆ. ಹಲವಾರು ಮಾಸ್ತಿ ಶಿಲ್ಪಗಳ ಕೈಯಲ್ಲಿ

ಲಿಂಬೆಹಣ್ಣನ್ನು ಹಿಡಿದಿರುವಂತೆ ಚಿತ್ರಿಸಲಾಗಿರುತ್ತದೆ. ಮಾಸ್ತಿ ಕ್ರಿಯೆಯು ಮಂಗಳಕರವಾದುದು ಎಂಬುದನ್ನು ಈ ಕಳಸ ಧ್ವನಿಸುತ್ತದೆ. ಕೆಲವು ಮಾಸ್ತಿ ಶಿಲ್ಪದಲ್ಲಿ ಕನ್ನಡಿ ಹಿಡಿದಿರುವಂತೆಯೂ ಚಿತ್ರವಿರುತ್ತದೆ. ಮೃತನ ಪತ್ನಿ ಸೌಭಾಗ್ಯ ಸಂಕೇತಗಳಿಂದಲೂ, ಮಂಗಳ ಮತ್ತು ಅಲಂಕಾರ ವಸ್ತುಗಳಿಂದಲೂ ಸುಂದರವಾಗಿ ಸಿಂಗರಿಸಿಕೊಂಡು ಸತಿಯಾಗಲು ಹೋಗುತ್ತಿದ್ದಳು. ಇವುಗಳಲ್ಲದೆ, ಧ್ವಜಗಳು, ಛತ್ರಿಗಳು ಅಥವಾ ರಾಜಛತ್ರಿ, ಪಲ್ಲಕ್ಕಿ ಅಥವಾ ಮೇಣೆಗಳನ್ನೂ ಇಂತಹ ಶಿಲ್ಪಗಳಲ್ಲಿ ಕಂಡುಬರುತ್ತವೆ. ಇವುಗಳ ಜೊತೆಗೆ ಮುಕ್ಕೋಡೆ, ಚೌರಿ, ಸೂರ್ಯ-ಚಂದ್ರ, ನಂದಿಯ ಶಿಲ್ಪ ಮತ್ತು ಮಂಟಪದ ಮೇಲೆ ಶಿಖರದ ಮಾದರಿಗಳನ್ನು ಕೆತ್ತಲಾಗಿರುತ್ತದೆ.

ಮೋಡಗಳು: ಮತ್ತೆ ಕೆಲವು ಸ್ಮಾರಕ ಶಿಲ್ಪಗಳಲ್ಲಿ ಮೋಡಗಳನ್ನು ಕೆತ್ತಿರುವ ಸಂಕೇತಗಳಿರುತ್ತವೆ. ಉದಾಹರಣೆಗೆ ಖಣಾಪುರ ತಾಲೂಕಿನ ಗೊಧೋಳಿಯ ಮೂರು ಹಂತದ ತುರುಗೋಳ್ ಶಿಲ್ಪದ ಮಧ್ಯದ ಪಟ್ಟಿಕೆಯಲ್ಲಿ ಮರಣ ಹೊಂದಿದ ವೀರನನ್ನು ಸ್ವರ್ಗಕ್ಕೆ ಒಯ್ಯುವ ದೃಶ್ಯವಿದೆ. ಇದರಲ್ಲಿ ಇಬ್ಬರು ಅಪ್ಸರೆಯರು ವೀರನನ್ನು ಹೆಗಲ ಮೇಲೆ ಕೈ ಹಾಕಿ ಒಯ್ಯುತ್ತಿದ್ದಾರೆ. ವೀರನನ್ನು ಮೋಡಗಳ ಮಧ್ಯ ಕರೆದುಕೊಂಡು ಹೋಗುತ್ತಿರುವ ಚಿತ್ರಣ ಆಕರ್ಷಕವಾಗಿದೆ. ಇಲ್ಲಿ ವೀರನ ಕಾಲ ಕೆಳಗೆ ಮತ್ತು ಪಕ್ಕದಲ್ಲಿ ಮೋಡಗಳನ್ನು ಕಂಡರಿಸಲಾಗಿದೆ. ಮೋಡದ ಮಧ್ಯ ವೀರನನ್ನು ಚಿತ್ರಿಸಲಾಗಿದೆ. ಇಲ್ಲಿಯೇ ಇರುವ ಮತ್ತೊಂದು ಶಿಲ್ಪದಲ್ಲಿ ಸ್ವರ್ಗಸ್ಥನಾದ ವೀರನನ್ನು ಅಪ್ಸರೆಯರು ಸ್ವರ್ಗಕ್ಕೆ ಒಯ್ಯುತ್ತಿದ್ದಾರೆ. ವೀರನ ಸುತ್ತ ಮೋಡದ ರಚನೆಯಿದೆ. ಜೊತೆಗೆ ಅವನ ಪಕ್ಕದಲ್ಲಿ ಗಣಗಳ ಚಿತ್ರಣವಿದ್ದು ಅವರು ಸಂಗೀತ ವಾದ್ಯಗಳನ್ನು ನುಡಿಸುತ್ತಿದ್ದಾರೆ.

ಕೆಲ ಶಿಲ್ಪಗಳಲ್ಲಿ ವಿವಿಧ ಮಾದರಿಯ ಪಕ್ಷಿಗಳನ್ನು ಸಹ ಕೆತ್ತಿರುವುದು ನಮಗೆ ಕಂಡುಬರುತ್ತದೆ. ಉದಾಹರಣೆಗೆ ದೇಗಾಂವಿಯ ಈ ಶೈವ ಶಾಸನ ಶಿಲ್ಪದ ಮಧ್ಯದಲ್ಲಿ ಮಂಟಪವಿದ್ದು, ಅದರ ಇಕ್ಕೆಲಗಳಲ್ಲಿ ಹಂಸ ಮತ್ತು ನವಿಲುಗಳ ಸಾಲಿನ ರಚನೆಯಿದೆ.

**9. ಸ್ಮಾರಕ ಶಿಲ್ಪಗಳ ಪಾರಂಪರಿಕ ಮಹತ್ವ:**

1. ಇವುಗಳು ಅರಸುಮನೆತನಗಳಲ್ಲದೆ, ಸಮಾಜದ ಸಾಮಾನ್ಯ ಕೆಳಸ್ತರದ ಜನರ ಜೀವನ ಮೌಲ್ಯವನ್ನು ಪ್ರತಿನಿಧಿಸುವ ಪ್ರಮುಖವಾದ ದಾಖಲೆಗಳಾಗಿವೆ. ಸಮಾಜದ ಕಟ್ಟ ಕಡೆಯ ಜನ ಸಮೂಹದ ತ್ಯಾಗ-ಬಲಿದಾನಗಳನ್ನು ತಿಳಿಸುವ ಮುಖ್ಯವಾದ ವಾಹಿನಿಗಳಾಗಿವೆ.
2. ಇವು ಪ್ರಾಚೀನ ಕಾಲದ ಜನರ ವೀರೋಚಿತ ನೈತಿಕತೆಯನ್ನು ತಿಳಿಯಲು ನಮಗೆ ಸಹಾಯಕವಾಗಿವೆ ಎನ್ನಬಹುದಾಗಿದೆ. ಅಂದಿನ ಕಾಲದ ನೈತಿಕ ಮೌಲ್ಯಗಳು, ನಿಸ್ವಾರ್ಥ ತ್ಯಾಗಮಯ ಜೀವನದ ಕುರುಹುಗಳಾಗಿವೆ.
3. ಶಾಸನ ಮತ್ತು ಇತರೇ ಕಂಡರಿಸಲ್ಪಟ್ಟ ಸ್ಮಾರಕ ಶಿಲ್ಪಗಳು ನಮಗೆ ಅತ್ಯಮೂಲ್ಯವಾದ ಐತಿಹಾಸಿಕ ಮತ್ತು ಪುರಾತತ್ವೀಯ ಆಕರಗಳಾಗಿವೆ. ಇಂತಹ ಸ್ಮಾರಕ ಶಿಲ್ಪಗಳು ಅಂದಿನ ಕಾಲದಲ್ಲಿ ರೂಢಿಯಲ್ಲಿದ್ದ ಯುದ್ಧ ಕಲೆ, ಶಸ್ತ್ರಾಸ್ತ್ರಗಳು, ಉಡುಪುಗಳು, ಗ್ರಾಮೀಣ ಆರ್ಥಿಕತೆ (ಗೋವುಗಳ) ಮತ್ತು ಜನರ ಅಂತ್ಯ ಸಂಸ್ಕಾರದಂತಹ ಸಂಪ್ರದಾಯಗಳ ಕುರಿತು ಬೆಳಕನ್ನು ಚೆಲ್ಲುತ್ತವೆ.
4. ಸ್ಮಾರಕ ಶಿಲ್ಪಗಳು ಹಿಂದಿನ ಕಾಲದ ಜನರ ಕಾರ್ಯಗಳನ್ನು ಶಾಶ್ವತಗೊಳಿಸುವಂತಹ ಪ್ರಮುಖ ಆಕರಗಳೆನ್ನಲಾಗಿದೆ. ಏಕೆಂದರೆ ಶಿಲೆಯಲ್ಲಿ ಕೆತ್ತಿದ ದಾಖಲೆಗಳು ಸಾವಿರಾರು ವರ್ಷ ಚಾರಿತ್ರಿಕ ದಾಖಲೆಗಳಾಗಿ ಮುಂದುವರೆಯುತ್ತವೆ. ಕೆಲವು ಪ್ರದೇಶಗಳಲ್ಲಿ

ಯುದ್ಧದಲ್ಲಿ ಮಡಿದ ಶೂರರ ಸ್ಮಾರಕಗಳಿಗೆ ದೈವೀ ಭಾವನೆಯಿಂದ ಕಂಡು, ಪೂಜಿಸುವ ಪರಂಪರೆಯನ್ನು ನಾವು ನೋಡುತ್ತೇವೆ.

5. ಸಾಮಾಜಿಕ ಕಟ್ಟುಪಾಡುಗಳಿಗೆ ಮಹಿಳೆಯರು ಹೇಗೆ ಬಲಿಯಾಗಿದ್ದರೆಂಬುದನ್ನು ಸಹ ನಾವು ಅರಿಯಬಹುದು. ಏಕೆಂದರೆ, ತನ್ನ ಪತಿಯನ್ನು ಕಳೆದುಕೊಂಡ ಮಹಿಳೆ, ವಿಧವೆಯಾಗಿ ನರಕ ಸದೃಶ ಜೀವನದಿಂದ ಮುಕ್ತಿಯಾಗಲು ಸತಿಯಂತಹ ಆಚರಣೆಗೆ ಒಳಗಾಗಿದ್ದರೆಂಬುದನ್ನು ನಾವು ಅರಿಯಬಹುದಾಗಿದೆ.
6. ಸ್ಮಾರಕ ಶಿಲ್ಪಗಳು ಕೇವಲ ಕೆತ್ತನೆಗಳಾಗಿರದೆ, ಅವು ಪ್ರಾಚೀನ ಲಿಪಿ ಮತ್ತು ಭಾಷೆಗಳ ಪರಿಚಯವನ್ನೂ ಸಹ ನಮಗೆ ಮಾಡಿಸುತ್ತವೆ. ಅಂದು ಪ್ರಾದೇಶಿಕವಾಗಿ ಪ್ರಚಲಿತದಲ್ಲಿದ್ದ ಭಾಷೆಗಳಲ್ಲಿಯೇ ಇವುಗಳನ್ನು ದಾಖಲಿಸಲಾಗಿರುತ್ತದೆ.
7. ಇಂತಹ ಸ್ಮಾರಕ ಶಿಲ್ಪಗಳು ಪ್ರಾಚೀನ ಕಾಲದ ಧಾರ್ಮಿಕ ಆಚರಣೆ ಮತ್ತು ಸಂಪ್ರದಾಯಗಳ ಕುರಿತು ಅರಿಯಲು ಸಹಾಯಕವಾಗುತ್ತವೆ. ಇವುಗಳನ್ನು ಗ್ರಾಮದ ಗಡಿಯಲ್ಲಿ, ಕೂಡು ರಸ್ತೆಗಳಲ್ಲಿ, ದೇವಾಲಯದ ಹತ್ತಿರ ನೆಟ್ಟಿರುವ ಕಲ್ಲುಗಳಾಗಿರದೆ, ಅಂದು ಪ್ರಚಲಿತದಲ್ಲಿದ್ದ ಧಾರ್ಮಿಕ ಆಚರಣೆಗಳನ್ನು ಅರಿಯಲು ನಮಗೆ ಸಹಾಯಕವಾಗುತ್ತವೆ.
8. ಈ ಪ್ರದೇಶದ ವೀರಗಲ್ಲು ಹಾಗೂ ಇತರೇ ಶಿಲ್ಪಗಳನ್ನು ಗಮನಿಸಿದಾಗ ಧಾರ್ಮಿಕ ಸ್ಥಿತ್ಯಂತರದ ಮಾಹಿತಿ ನಮಗೆ ಸಿಗುವುದು. ಇಲ್ಲಿನ ಬಹುತೇಕ ವೀರಗಲ್ಲುಗಳು ಹಾಗೂ ಶಾಸನ ಶಿಲ್ಪಗಳು ಶೈವ ಧರ್ಮದ ಪ್ರಾಬಲ್ಯವನ್ನು ತಿಳಿಸುತ್ತವೆ.
9. ಯುದ್ಧದಲ್ಲಿ ಹೋರಾಡಿ ಮಡಿಯುವುದು ಅವರಿಗೆ ಸ್ವರ್ಗದ ಸಮಾನವಾಗಿತ್ತು. ಸೋತು ಹಿಂದಿರುಗುವುದು ಅವರಿಗೆ ಅಗೌರವದ ಸಂಗತಿಯಾಗಿತ್ತು. ಅಂದರೆ ಪ್ರಾಚೀನ ಕಾಲದಲ್ಲಿ ಇದ್ದ ಸಾಮಾಜಿಕ ಕಟ್ಟುಪಾಡುಗಳು, ಆಚರಣೆಗಳು ಹೇಗೆ ಮೌಲ್ಯಗಳನ್ನು ಬಿಂಬಿಸುತ್ತವೆಂಬುದನ್ನು ಅರಿಯಬಹುದಾಗಿದೆ.

**10. ಉಪಸಂಹಾರ:**

ಒಟ್ಟಿನಲ್ಲಿ ನಮಗೆ ದೊರೆಯುವ ಎಲ್ಲ ಶಿಲ್ಪಗಳನ್ನು ಗಮನಿಸಿದಾಗ, ಈ ಪರಿಸರದಲ್ಲಿ ಆಳಿದ ಅರಸರ ಯಶಸ್ವಿಗೆ ಕಾರಣರಾದ ಸಾಮಾನ್ಯ ಜನರು ನಾಡು, ದೇಶ, ಪಶು ಪ್ರಾಣಿಗಳ ಹಾಗೂ ಮಹಿಳೆಯರ ರಕ್ಷಣೆಗೆ ಇಲ್ಲಿ ಜನ ತಮ್ಮ ಪ್ರಾಣತ್ಯಾಗ ಮಾಡಲು ಹಿಂಜರಿಯುತ್ತಿರಲಿಲ್ಲ ಎಂಬ ಅಂಶ ನಮಗೆ ತಿಳಿಯುತ್ತದೆ. ಅಲ್ಲದೇ ಮಾಸ್ತಿಗಲ್ಲುಗಳು ಮಹಿಳೆಯರು ಹೇಗೆ ಸಾಮಾಜಿಕ ಕಟ್ಟಳೆಗಳಿಗೆ ಮತ್ತು ಪುರುಷ ಪ್ರಧಾನ ಶೋಷಣೆಗೆ ಒಳಗಾಗಿದ್ದಳೆಂದು ಇಲ್ಲಿ ಕಂಡುಬರುವ ಸಂಗತಿಯಾಗಿದೆ. ಸ್ತ್ರೀ ಪುರುಷರು ಭೇದವಿಲ್ಲದೆ ಆಭರಣ, ಉಡಿಗೆ ತೊಡಿಗೆಗಳನ್ನು ಧರಿಸುತ್ತಿದ್ದರು. ಸಾಮಾನ್ಯ ಜನರು ಯುದ್ಧಗಳಲ್ಲಿ ಭಾಗವಹಿಸುತ್ತಿದ್ದರು. ಅಂದು ಗ್ರಾಮ, ದನಕರುಗಳನ್ನು ಮತ್ತು ಸ್ತ್ರೀಯರನ್ನು ರಕ್ಷಿಸುವುದು ಗ್ರಾಮದ ಎಲ್ಲ ಜನರ ನೈತಿಕವಾದ ಕರ್ತವ್ಯವಾಗಿತ್ತು. ಅರಸರ ಯಶಸ್ವಿಗೆ ಇವರ ಕೊಡುಗೆ ಅಪಾರವಾಗಿತ್ತು. ಜೊತೆಗೆ ಶಿಲ್ಪಗಳಲ್ಲಿ ಕಂಡುಬರುವ ಆಭರಣ ಮತ್ತು ಉಡಿಗೆ-ತೊಡಿಗೆ ಮತ್ತು ಕೇಶಾಲಂಕಾರದಂತಹ ಪರಂಪರೆ ಇಂದಿಗೂ ನಮ್ಮ ಸಮಾಜದಲ್ಲಿ ಉಳಿದುಬಂದಿದ್ದು ವಿಶೇಷವೆನ್ನಬಹುದು. ಒಟ್ಟಾರೆಯಾಗಿ ನಾಡಿನ ಪ್ರಭುಗಳ ಯಶಸ್ವಿಗೆ ಜನರ ತ್ಯಾಗ, ನಿಸ್ವಾರ್ಥ ಸೇವೆ ಮತ್ತು ಬಲಿದಾನಗಳು ಪ್ರಮುಖವಾಗಿದ್ದವೆನ್ನಬಹುದು. ಇಂತಹ ಸ್ಮಾರಕ ಶಿಲ್ಪಗಳನ್ನು ರಕ್ಷಿಸಿ ನಮ್ಮ ಪರಂಪರೆಯನ್ನು ಉಳಿಸಿಕೊಳ್ಳುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಬೇಕು.

**ಪರಾಮರ್ಶನ ಗ್ರಂಥಗಳು:**


1. ಶ್ರೀಕಂಠಯ್ಯ.ತೀ.ನಂ, (1949), ಕವಿ ರನ್ನ ಗಧಾಯುದ್ಧ ಸಂಗ್ರಹಂ, ಮೈಸೂರು.
2. ಶೇಷಶಾಸ್ತ್ರಿ, ಆರ್., (2005), ಶಾಸನ ಸಂಚಯ, ಬೆವಿವಿ.
3. ಪರಮಶಿವಮೂರ್ತಿ.ಡಿ.ವಿ., (1999) ಕನ್ನಡ ಶಾಸನ ಶಿಲ್ಪ, ಕವಿವಿ, ಹಂಪಿ.
4. ಕಲಬುರ್ಗಿ.ಎಂ.ಎಂ., ಸಮಾಧಿ–ಬಲಿದಾನ–ವೀರ ಮರಣ, ಸ್ಮಾರಕಗಳು.
5. ಚಿದಾನಂದಮೂರ್ತಿ.ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಸಪ್ನ, ಬೆಂಗಳೂರು.
6. ನಾಗೇಗೌಡ.ಹೆಚ್.ಎಲ್., ಪ್ರವಾಸಿ ಕಂಡ ಇಂಡಿಯಾ, ಸಂಪುಟ–1.
7. Setter.S., (1986) Inviting Death, KU Dharwad.
8. Altekar.A.S., The Position of Women in Hindu Civilization.
9. ಕ್ಷೇತ್ರಕಾರ್ಯದ ಮಾಹಿತಿ.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.